<u>ದಿನಾಂಕಃ **22-11-2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಎದುರುದಾರ **1** ಮತ್ತು **2** ರ ಪರ ಶ್ರೀ ಎಂ ಎನ್ ಎಸ್ ವಕೀಲರಿಂದಃ</u>

ಆ ದಿನ ನಾನು ಮತ್ತು ನನ್ನ ತಮ್ಮ ಕಟ್ಟೆ ಮನೆಯಿಂದ ಜಯಪುರಕ್ಕೆ ಬೈಕಿನಲ್ಲಿ ಹೋಗುತ್ತಿದ್ದೆವು. ನನ್ನ ತಮ್ಮನಿಗೆ 15 ವರ್ಷದಿಂದ ಬೈಕು ಚಲಾಯಿಸುವ ಅನುಭವ ಇರುತ್ತದೆ. ನನಗೆ ಬೈಕು ಚಲಾಯಿಸಲು ಬರುವುದಿಲ್ಲ ಎಂದರೆ ಸರಿ. ನಾನು ಬೈಕಿನ ಹಿಂಬದಿ ಸವಾರನಾಗಿ ಇದ್ದೆ ಎಂದರೆ ಸರಿ. ನಾನು ಹಿಂಬದಿ ಸವಾರನಾದ ಕಾರಣ ರಸ್ತೆ ಮುಂದೆ ಏನು ಅಗುತ್ತಿತ್ತು ಎಂದು ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ. ಅಪಘಾತ ಹೇಗೆ ಆಗಿರುತ್ತದೆ ಎಂದು ನನಗೆ ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ಅಪಘಾತ ನನ್ನ ತಮ್ಮನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಬಸ್ ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ **3** ರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ